

# ಪ್ರಕೃತಿ ಸಂಪದ

## ವಿದ್ಯಾರ್ಥಿ ಮಂಥನ

## ಯುಗಾದಿ ವಿಶೇಷ ಸಂಚಿಕೆ





**ಸಮಸ್ತ ಜನತೆಗೆ ಶುಭಕೃತ್ ಸಂವತ್ಸರ ಯುಗಾದಿ ಹಬ್ಬದ ಶುಭಾಶಯಗಳು**

# ನಿಸರ್ಗ ವಿದ್ಯಾನಿಕೇತನ ಶಾಲೆ


## ಎರಡು ದಶಕಗಳ ಪಯಣದ ಸಿಂಹಾವಲೋಕನ







ಬೆಂಗಳೂರಿನ ಪ್ರತಿಷ್ಠಿತ ಶಾಲೆಗಳಲ್ಲಿ ನಿಸರ್ಗ ವಿದ್ಯಾನಿಕೇತನ ಶಾಲೆಯೂ ಒಂದು. ನಗರದ ಉತ್ತರ ಭಾಗದ ಹೆಸರಘಟ್ಟ ಮುಖ್ಯರಸ್ತೆಯ ಸಿಡೇದಹಳ್ಳಿ-ಸಂಪಂಗಿ ರಾಮಯ್ಯ ಬಡಾವಣೆಯಲ್ಲಿ ಶಾಲೆ ಇದೆ. 1999-2000ನೇ ಸಾಲಿನಲ್ಲಿ ಈ ಶಾಲೆಯನ್ನು ನಿಸರ್ಗ ಎಜುಕೇಷನ್ ಸೊಸೈಟಿ ಆಡಳಿತ ಮಂಡಳಿಯು ಆರಂಭಿಸಿತು. ಶಾಲೆಯನ್ನು ಸಿದ್ಧಗಂಗಾ ಮಠಾಧೀಶರಾದ ತ್ರಿವಿಧ ದಾಸೋಹಿ ಶ್ರೀ ಡಾ.ಶಿವಕುಮಾರ ಸ್ವಾಮೀಜಿಯವರ ಆಶೀರ್ವಚನದೊಂದಿಗೆ ಲೋಕಾರ್ಪಣೆಗೊಂಡಿತು. ಆಗ ಸ್ವಾಮೀಜಿಯವರು, "ನಿಸರ್ಗ ಶಾಲೆಯ ಮೂಲಕ ಪ್ರತಿಯೊಬ್ಬ ಮಗುವಿಗೂ ಗುಣಮಟ್ಟದ ಶಿಕ್ಷಣ, ಶಿಸ್ತು ಮತ್ತು ಸಂಸ್ಕಾರ, ಸಂಸ್ಕೃತಿ ಬೆಳೆಯಲಿ ಎಂದು ಆಶಯ ವ್ಯಕ್ತಪಡಿಸಿದ್ದರು. ಶ್ರೀಗಳ ಆಶಯದಂತೆ ಸಂಸ್ಥಾಪಕರಾದ ಕೆ. ಉದಯರತ್ನಕುಮಾರ್ ಅವರ ಮಾರ್ಗದರ್ಶನದಲ್ಲಿ ಶಾಲೆ ಇಂದಿಗೂ ಮುನ್ನಡೆಯುತ್ತಿದೆ. ಗುರುಕುಲ ಮಾದರಿಯ ಗುಣಮಟ್ಟದ ಶಿಕ್ಷಣದೊಂದಿಗೆ ಭವಿಷ್ಯತ್ತಿನ ಜವಾಬ್ದಾರಿಯುತ ಪ್ರಜೆಗಳನ್ನು ರೂಪಿಸುವ ಅತ್ಯಂತ ಗುರುತರ ಕಾರ್ಯವನ್ನು ಕೈಗೊಂಡು ಶಾಲೆ ಮಹತ್ವದ ಹೆಜ್ಜೆಯನ್ನಿಡುತ್ತಿದೆ. ಎರಡು ದಶಕಗಳ ಪಯಣದ ಸಿಂಹಾವಲೋಕನವನ್ನು ತಮ್ಮೊಂದಿಗೆ ಹಂಚಿಕೊಳ್ಳುತ್ತೇವೆಂದು ಆಶಿಸುತ್ತೇವೆ.








# ಗುಣಮಟ್ಟದ ಶಿಕ್ಷಣ, ಶಿಸ್ತು ಸಂಸ್ಕಾರಕ್ಕೆ ಹೆಸರಾದ ನಿಸರ್ಗ ವಿದ್ಯಾನಿಕೇತನ

ಮಕ್ಕಳಿಗೆ ಒಳ್ಳೆಯ ಶಿಕ್ಷಣ ಹಾಗೂ ಶಿಸ್ತು ಜೊತೆ-ಗೆ ಉತ್ತಮ ಸಂಸ್ಕಾರ ಸಂಸ್ಕೃತಿ ನೀಡುವ ಜವಾಬ್ದಾರಿ ಪ್ರತಿಯೊಂದು ಶಾಲೆ ಮತ್ತು ಶಿಕ್ಷಕರ ಮೇಲಿದೆ. ಇದನ್ನು ಅತ್ಯಂತ ಶ್ರದ್ಧೆ ಮತ್ತು ಪ್ರಾಮಾಣಿಕತೆಯಿಂದ ಕಾರ್ಯರೂಪಕ್ಕೆ ತರುವುದರಲ್ಲಿ ಮೊದಲ ಪಂಕ್ತಿಯಲ್ಲಿ ಇರುವುದು ನಿಸರ್ಗ ವಿದ್ಯಾನಿಕೇತನ ಶಾಲೆ.

ನಗರದ ಹೆಸರಘಟ್ಟ ಮುಖ್ಯರಸ್ತೆಯ ಸಿಡೇದಹಳ್ಳಿ–ಕಿಲೋಸ್ಕರ್ ಲೇಔಟ್ ಅಸುಪಾಸಿನಲ್ಲಿರುವ ಪ್ರತಿಷ್ಠಿತ ನಿಸರ್ಗ ವಿದ್ಯಾನಿಕೇತನ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ, ಶಿಸ್ತು ಮತ್ತು ಸಂಸ್ಕಾರ ಕಲಿಸುವುದರಲ್ಲಿ ಹೆಸರಾಗಿದೆ. ಬೆಂಗಳೂರು ಉತ್ತರ ಶೈಕ್ಷಣಿಕ ಜಿಲ್ಲೆಯಲ್ಲೇ ಈ ಶಾಲೆ ಹಲವು ಹೊಸತನಗಳನ್ನು ಅಳವಡಿಸಿ ಕೊಂಡು ಮುನ್ನಡೆಯುತ್ತಿದೆ. ವಿಶೇಷವಾಗಿ ಬೆಂಗಳೂರಿನ ಉತ್ತರ ಭಾಗದಲ್ಲಿ ಅತ್ಯುತ್ತಮ ಶಾಲೆ ಹೆಗ್ಗಳಿಕೆ ಹೊಂದಿದೆ.


ಪ್ರತಿಷ್ಠಿತ ಈ ಶಾಲೆ, ಕಳೆದ ಎರಡು ದಶಕಗಳ ಹಿಂದೆ ಪುಟ್ಟ ಪ್ರಮಾಣದಲ್ಲಿ ಆರಂಭಗೊಂಡಿದ್ದು. ಈಗ ಬಹಳ ವಿಸ್ತಾರವಾಗಿ ಬೆಳೆದುನಿಂತಿದೆ, ಜೊತೆಗೆ ಜನಪ್ರಿಯತೆಯನ್ನು ಗಳಿಸಿದೆ. ಶಾಲೆ ಒಳ್ಳೆಯ ಸುಸಜ್ಜಿತ ಕಟ್ಟಡಕ್ಕಷ್ಟೇ ಸೀಮಿತವಲ್ಲ, ಗುಣಮಟ್ಟದ ಶಿಕ್ಷಣ ನೀಡಿಕೆಯಲ್ಲಿ ಮಾದರಿಯಾಗಿದೆ. ಇದೊಂದು ಯಾವುದೇ ಜಾತಿ, ಧರ್ಮಕ್ಕೆ ಅಂಟಿಕೊಳ್ಳದ ಮುಖ್ಯವಾಗಿ ರಾಜಕೀಯೇತರ ಶಿಕ್ಷಣ ಸಂಸ್ಥೆ ಎನ್ನಬಹುದು. ಮಾದರಿ ಶಾಲಾ ಆಡಳಿತ ಮಂಡಳಿ, ಅನುಭವಿ ಅಧ್ಯಾಪಕರು, ಶಿಕ್ಷಕರು, ನುರಿತ ಸಿಬ್ಬಂದಿಯನ್ನೊಳಗೊಂಡಿದೆ. ಶಿಕ್ಷಣ ನೀತಿಯ ಅನುಸಾರದ ರಾಜ್ಯ ಪಠ್ಯಕ್ರಮ ಅಳವಡಿಸಿಕೊಂಡಿದೆ. ಜಾಗತಿಕ ಪೈಪೋಟಿ ಎದುರಿಸಲು ಬೋಧನ ಕ್ರಮ ಆಂಗ್ಲ ಮಾಧ್ಯಮವಾದರೂ ಮಾತೃಭಾಷೆ ಕನ್ನಡವನ್ನು ಒಂದು ಭಾಷೆಯನ್ನಾಗಿ ಅತ್ಯಂತ ಪ್ರಭಾವಿತವಾಗಿ ಮಕ್ಕಳಿಗೆ ಬೋಧಿಸ ಲಾಗುತ್ತಿದೆ.ಒಂದೇ ಸೂರಿನಡಿ ಪೂರ್ವಪ್ರಾಥಮಿಕ, ಪ್ರಾಥಮಿಕ ಮತ್ತು ಪ್ರೌಢಶಾಲೆ ಸೇರಿದಂತೆ ಒಟ್ಟು ಮೂರು ಹಂತದ ತರಗತಿಗಳಿವೆ.

ಹೆಸರಿಗೆ ತಕ್ಕಂತೆ ಈ ಶಾಲೆ ನಗರೀಕರಣದ ನಡುವೆಯೂ ಹಚ್ಚ ಹಸಿರಿನ 'ನಿಸರ್ಗ' ದ ಮಡಿಲಿನಲ್ಲಿದೆ. ಸುತ್ತಲೂ ಕಟ್ಟಡ ನಡುವೆ ಶಾಲಾವರಣ ಇದೊಂದು ಅಚ್ಚಹಸಿರಿನ ನೆಡುತೋಪು. ಶ್ರೀಗಂಧ, ಸಂಪಿಗೆ, ಹಲಸು, ಮಾವು ಹೀಗೆ ಎಲ್ಲ ಜಾತಿಯ ಮರಗಿಡಗಳು ಬೆಳೆದುನಿಂತಿವೆ. ಶಾಲಾ ಕಟ್ಟಡದ ಸುತ್ತಲೂ ಮರಗಿಡಗಳು ಆಸರೆಯಾಗಿವೆ.ಶಾಲೆ, ವಾಹನಗಳ ಓಡಾಟದ ಅರ್ಭಟ, ಜನಜಂಗುಳಿ ಇಲ್ಲದೆ, ಜನವಸತಿ ಪ್ರದೇಶದ ನಡುವೆ ಸುಂದರವಾದ ಪರಿಸರದಲ್ಲಿದೆ. ಮಕ್ಕಳು ಎಲ್ಲೆಡೆಯಿಂದ ಶಾಲೆಗೆ ಬರಲು ಹೋಗಲು ಎರಡೂ ಕಡೆ ಮಾರ್ಗಗಳಿವೆ.

ಸುಸಜ್ಜಿತ ಕಟ್ಟಡ, ಸದಾ ಗಾಳಿ, ಬೆಳಕು ಬರುವ ವಿಶಾಲವಾದ ಕೊಠಡಿಗಳು, ಕಾಲಾನುಕಾಲಕ್ಕೆ ಅನುಗುಣವಾದ ಸ್ಮಾರ್ಟ ಕ್ಲಾಸ್ ಸೇರಿದಂತೆ ಆಧುನಿಕ ಸೌಲಭ್ಯಗಳನ್ನು ಅಳವಡಿಸಿಕೊಂಡಿದೆ. ವಿಸ್ತಾರವಾದ ಕಂಪ್ಯೂಟರ್ ಲ್ಯಾಬ್, ಬೆರುಗು ಮೂಡಿಸುವ ಕಲಾ ಕೇಂದ್ರ, ಅತ್ಯುನ್ನತ ದರ್ಜೆಯ ವಿಜ್ಞಾನ ಪ್ರಯೋಗಾಲಯವಿದೆ.

## ಶಾಲಾ ಮಕ್ಕಳಿಂದ ಗಿನ್ನಿಸ್ ದಾಖಲೆ

ನಿಸರ್ಗ ವಿದ್ಯಾನಿಕೇತನ ಶಾಲೆಯ ಮಕ್ಕಳು ಯೋಗದಲ್ಲಿ ಗಿನ್ನಿಸ್ ದಾಖಲೆ ಸೃಷ್ಟಿಸಿದ್ದಾರೆ. ಕಳೆದ 2019ರಂದು ಬೆಂಗಳೂರಿನ ಯಲಹಂಕದಲ್ಲಿ ನಡೆದ ವೀರಭದ್ರಾಸನದಲ್ಲಿ ಮಕ್ಕಳು ಗಿನ್ನಿಸ್ ದಾಖಲೆಗೆ ಪಾತ್ರ್ರಾಗಿದ್ದಾರೆ. ಬೆಂಗಳೂರಿನ ಸ್ವಾಮಿ ವಿವೇಕಾನಂದ ಯೋಗ ಸಂಶೋಧನಾ ಸಂಸ್ಥೆ ಹಾಗೂ ಅಮೆರಿಕ ಯೋಗ ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ನಡೆದ ಯೋಗಾಸನದ ಸಂದರ್ಭದಲ್ಲಿ ಗಿನ್ನಿಸ್ ದಾಖಲಾಗಿದೆ. ವೀರಭದ್ರಾಸನದಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿದ ಮಕ್ಕಳು ಗಿನ್ನಿಸ್ ದಾಖಲೆಗೆ ಸೇರ್ಪಡೆಗೊಂಡಿರುವ ಹೆಮ್ಮೆಯ ವಿಷಯ.



Dear Participant,

I am delighted to present you with this Certificate of Participation to recognize your important contribution to this GUINNESS WORLD RECORDS title.

At Guinness World Records, we have been measuring, verifying and recording the world's achievements since 1954. Today, our mission is to maintain an archive of records that inspires, engages and entertains people across the globe, and celebrates the world's best.

The record that you participated in is now one of the 40,000 world records that are held on the GUINNESS WORLD RECORDS database. Of the thousands of applications we receive every month, less than 5% actually make it to become an official entry in our archive. As a member of this select group, you should be extremely proud of your achievement.

On behalf of Guinness World Records, I would like to personally congratulate you on your GUINNESS WORLD RECORDS achievement.

ALISTAIR RICHARDS
President
Guinness World Records

GUINNESS WORLD RECORDS
CERTIFICATE
OF PARTICIPATION
NISARGA VIDYANIKETHANA
PARTICIPATED IN THE FOLLOWING RECORD EVENT:
The most people performing the Warrior I pose (yoga) simultaneously is 1391, and was achieved by Swami Vivekananda Yoga Research and Holistic Health Trust (India) and Yoga University of the Americas (USA), in Bangalore, India, on 22 December 2019.
OFFICIALLY AMAZING

## ಅಕ್ಷರಭ್ಯಾಸ

ಪ್ರತಿ ಮಗುವಿಗೂ ಅಕ್ಷರ ಜ್ಞಾನ ತುಂಬಾ ಮುಖ್ಯ. ಈ ಉದ್ದೇಶದಿಂದ ಶಾಲೆಯಲ್ಲಿ ಶೈಕ್ಷಣಿಕ ವರ್ಷದ ಆರಂಭಿಕ ದಿನದ ಶುಕ್ರವಾರದಂದು ವಿದ್ಯಾಧಾತೆ ಶ್ರೀ ಶಾರದಾ ದೇವಿಯ ಕೃಪೆಯೊಂದಿಗೆ ಪೂರ್ವ ಪ್ರಾಥಮಿಕ ಮಕ್ಕಳಿಗೆ ಪುರೋಹಿತರ ಸಮ್ಮುಖದಲ್ಲಿ ಅಕ್ಷರಭ್ಯಾಸ ಮಾಡಿಸಲಾಗುತ್ತದೆ. ಈ ಕಾರ್ಯಕ್ರಮವು ಕಳೆದ 20 ವರ್ಷಗಳಿಂದ ಕೂಡ ನಡೆಸಿಕೊಂಡು ಬರಲಾಗುತ್ತಿದೆ.



## RANKED NO 1 IN CO-CURRICULAR EDUCATION

## ರಾಷ್ಟ್ರೀಯ ಅಗ್ರಮಾನ್ಯ ಪ್ರಶಸ್ತಿ ಗರಿ







ಪ್ರತಿವರ್ಷ ದೇಶದ ಪ್ರತಿಷ್ಠಿತ ಎಜುಕೇಷನ್ ಟುಡೇ ಸಂಸ್ಥೆ ಯವರು ದೇಶಾದ್ಯಂತ ಪಠ್ಯ ಮತ್ತು ಸಹಪಠ್ಯ ಚಟುವಟಿಕೆಗಳಲ್ಲಿ ಸಂಬಂಧಿಸಿದಂತೆ 60ಕ್ಕಿಂತಲೂ ಹೆಚ್ಚು ಆಯಾಮಗಳಲ್ಲಿ ಸಮೀಕ್ಷೆಯನ್ನು ಮಾಡಿಕೊಂಡು ಬರುತ್ತಿದೆ. ಅದರಂತೆ 2021–22ನೇ ಸಾಲಿನಲ್ಲಿ ಪಠ್ಯೇತರ ಚಟುವಟಿಕೆಗಳಿಗೆ ಎಜುಕೇಷನ್ ಟುಡೇ ಸಂಸ್ಥೆಯು ರಾಜ್ಯ ಪಠ್ಯಕ್ರಮದ ಶಾಲೆಗಳಲ್ಲಿ ಕೊಡಮಾಡುವ Ranked No 1 in Co-curricluar Education ಎಂಬ ರಾಷ್ಟ್ರೀಯ ಅಗ್ರಮಾನ್ಯ ಪ್ರಶಸ್ತಿಯನ್ನು 'ನಿಸರ್ಗ ವಿದ್ಯಾನಿಕೇತನ ಶಾಲೆ' ಗಳಿಸಿದೆ. ಬೆಂಗಳೂರಿನಲ್ಲಿ ಮಾರ್ಚ್ 3ರಂದು ನಡೆದ ಅದ್ದೂರಿ ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಮಟ್ಟದ ಶಿಕ್ಷಣ ತಜ್ಞರು, ಇನ್ನಿತರ ಗಣ್ಯರಿಂದ ಶಾಲೆಯ ಆಡಳಿತಾಧಿಕಾರಿಗಳು, ಮುಖ್ಯೋಪಾಧ್ಯಾಯರುಗಳು ಹಾಗೂ ಹಿರಿಯ ಶಿಕ್ಷಕರು ಪ್ರಶಸ್ತಿ ಸ್ವೀಕರಿಸಿದ್ದಾರೆ. ಈ ಪುರಸ್ಕಾರ ಮಾತ್ರವಲ್ಲ, ಕಳೆದ ದಶಕಗಳಿಂದ ರಾಜ್ಯ ಮತ್ತು ರಾಷ್ಟ್ರದ ಮಟ್ಟದ ಅನೇಕ ಪ್ರಶಸ್ತಿ ಪುರಸ್ಕಾರಗಳಿಗೆ ಶಾಲೆಯ ಭಾಜನವಾಗಿದೆ.

## ಪ್ಲಾಸ್ಟಿಕ್ ಮುಕ್ತ ಶಾಲೆ : ಇಡೀ ರಾಜ್ಯಕ್ಕೆ ಮಾದರಿ




ನಿಸರ್ಗ ವಿದ್ಯಾನಿಕೇತನ ಶಾಲೆ ಪ್ಲಾಸ್ಟಿಕ್ ಮುಕ್ತ ಶಾಲೆ ಎಂಬ ಹೆಗ್ಗಳಿಕೆ ಹೊಂದಿದೆ. ಸರ್ಕಾರ, ಅಂದರೆ ಸಾರ್ವಜನಿಕ ಶಿಕ್ಷಣ ಇಲಾಖೆ ರಾಜ್ಯದ ಎಲ್ಲ ಶಾಲೆಗಳಲ್ಲಿ ಪ್ಲಾಸ್ಟಿಕ್ ಮುಕ್ತಗೊಳಿಸಬೇಕೆಂಬ ಆದೇಶವನ್ನು ಇತ್ತೀಚೆಗಷ್ಟೇ ಹೊರಡಿಸಿದೆ. ಆದರೆ, ಈ ಶಾಲೆ, ಕಳೆದ ಐದು ವರ್ಷಗಳ ಹಿಂದೆಯೇ ಶಾಲೆಯಲ್ಲಿ ಪ್ಲಾಸ್ಟಿಕ್ ಬಳಕೆಗೆ ನಿಷಿದ್ಧಗೊಳಿಸಿದೆ. ಮಕ್ಕಳ ಮತ್ತು ಪೋಷಕರ ಸಹಕಾರದಿಂದ ಶಾಲೆ ಪ್ಲಾಸ್ಟಿಕ್ ಮುಕ್ತ ಎಂಬ ಹೆಸರಿಗೆ ಭಾಜನವಾಗಿದೆ. ಶಾಲೆಯಲ್ಲಿ ಪ್ಲಾಸ್ಟಿಕ್ ನಿಂದ ತಯಾರಾದ ಯಾವುದೇ ತರದ ವಸ್ತುಗಳನ್ನು ಬಳಕೆ ಮಾಡುವಂತಿಲ್ಲ. ಇಲ್ಲಿ ಪ್ಲಾಸ್ಟಿಕ್ ಕೈ ಚೀಲ, ಪ್ಲಾಸ್ಟಿಕ್ ಫ್ಲೆಕ್ಸ್, ಬ್ಯಾನರ್, ಫ್ಲ್ಯಾಗ್, ತಟ್ಟೆ, ಲೋಟ, ಚಮಚ ಹೀಗೆ ಎಲ್ಲವೂ ನಿಷಿದ್ಧ. ಬದಲಿಗೆ ಬಟ್ಟೆ ಬ್ಯಾಗ್, ಬಟ್ಟೆ ಬಾವುಟ, ಫ್ಲೆಕ್ಸ್, ಬ್ಯಾನರ್ ಇಲ್ಲಿ ಸುಳಿಯೋ ಇಲ್ಲ. ಊಟ, ತಿಂಡಿಗೆ ಸ್ಟೀಲ್ ತಟ್ಟೆಗಳ ಬಳಕೆ, ಮಕ್ಕಳಿಗೆ ಪ್ಲಾಸ್ಟಿಕ್ ನಿಂದ ಸುತ್ತಿದ ಚಾಕಲೇಟ್ ನಿಷೇಧ. ಬದಲಿಗೆ ಸಿಹಿ ತಿನಿಸುಗಳ ಹಂಚಿಕೆ ಮಾಡಲಾಗುವುದು. ಶಾಲೆ ಕೇವಲ ಪ್ಲಾಸ್ಟಿಕ್ ಮುಕ್ತವಲ್ಲದೆ, ಕನಿಷ್ಠ ತ್ಯಾಜ್ಯ ಉತ್ಪಾದನೆಗೂ ಹೆಸರು ಮಾಡಿದೆ.

## ಬಹುಸಂಸ್ಕೃತಿ ಶಿಕ್ಷಣದ ದಿಕ್ಸೂಚಿ

ಮಕ್ಕಳಿಗೆ ಮಾನಸಿಕ ಹಾಗೂ ದೈಹಿಕವಾಗಿ ಹೆಚ್ಚು ಸಬಲರನ್ನಾಗಿಸುವ ನಿಟ್ಟಿನಲ್ಲಿ ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳನ್ನು ಸದಾ ಸಕ್ರಿಯವಾಗಿ ತೊಡಗಿಸಿಕೊಳ್ಳುತ್ತಿದೆ. ಮಕ್ಕಳಲ್ಲಿ ಕ್ರೀಡೆ ಬಗ್ಗೆ ಹೆಚ್ಚು ಉತ್ತೇಜನ ನೀಡಲು ಶಾಲಾ ಸಮೀಪದಲ್ಲೇ ಕ್ರೀಡಾವರಣವಿದೆ. ಸ್ಕೌಟ್ಸ್ ಆಂಡ್ ಗೈಡ್ಸ್, ಭಾರತೀಯ ಸೇವಾದಳ, ರೆಡ್ ಕ್ರಾಸ್, ಭಾರತೀಯ ಅಂಚೆ ಇಲಾಖೆಯೊಂದಿಗೆ ನಿಕಟ ಸಂಪರ್ಕ ಇನ್ನಿತರ ಮಕ್ಕಳ ಬೌದ್ಧಿಕ ಬೆಳವಣಿಗೆ ಪೂರಕವಾದ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ವಿಶೇಷವಾಗಿ ಶಾಲೆಯಲ್ಲಿ ತಾರಸಿ ಕೈತೋಟ ಇದೆ. ಇಲ್ಲಿ ಬಗೆ ಬಗೆ-ಯ ಹೂ, ಹಣ್ಣುಗಳನ್ನು ಬೆಳೆಯಲಾಗುತ್ತಿದ್ದು, ಈ ಮೂಲಕ ಮಕ್ಕಳಿಗೆ ವ್ಯವಸಾಯ ಅಂದರೆ ಕೃಷಿ ಜ್ಞಾನವನ್ನು ಕೂಡ ಕಲಿಸಲಾಗುತ್ತಿದೆ. ಕೃಷಿ ಮತ್ತು ಕೃಷಿಯೇತರ ವಿಷಯಗಳ ಬಗ್ಗೆ ಬೋಧನಾ ವ್ಯವಸ್ಥೆಯೂ ಇದೆ. ಶಿಕ್ಷಣ ನೀಡಿಕೆಯಲ್ಲಿ ಯಾವುದೇ ತಾರತಮ್ಯವಿಲ್ಲ. ಎಲ್ಲಾ ಜಾತಿ,ಧರ್ಮದ ಮಕ್ಕಳು ವ್ಯಾಸಂಗ ಮಾಡುತ್ತಿದ್ದಾರೆ. ಮುಖ್ಯವಾಗಿ ಪ್ರತಿಯೊಬ್ಬರಿಗೂ ಸಮಾನ ಶಿಕ್ಷಣ ನೀಡುವ ಮೂಲಕ ಸಮಸಮಾಜದ ಗುಣವನ್ನು ಮಕ್ಕಳಿಗೆ ಬೆಳೆಸುತ್ತಿದೆ. ಮತ್ತೆ ಮಕ್ಕಳ ಶೈಕ್ಷಣಿಕ ಪ್ರಗತಿಗೆ ನೆರವಾಗುತ್ತಿದೆ. ಅದಕ್ಕಾಗಿ ವಿಶೇಷ ಶಿಕ್ಷಕರು ಕೂಡ ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಅಂಕಗಳ ಗಳಿಕೆ, ದರ್ಜೆ, ಶ್ರೇಣಿ ಎಲ್ಲಾ ಮಕ್ಕಳಿಗೆ ಅನಿವಾರ್ಯ ಹೌದು, ಆದರೆ, ಅವುಗಳೇ ಮಕ್ಕಳ ಅಭ್ಯಾಸಕ್ಕೆ ಮಾನದಂಡವಲ್ಲ. ಕನ್ನಡ, ಇಂಗ್ಲೀಷ್, ಹಿಂದಿ, ಸಂಸ್ಕೃತ ಸೇರಿದಂತೆ ಹಲವು ಭಾಷೆಗಳ ಪಾಂಡಿತ್ಯ ಬೇಕು. ಜೊತೆಗೆ ಜ್ಞಾನ–ವಿಜ್ಞಾನ, ಕಲೆ, ಕ್ರೀಡೆ ಹೀಗೆ ಎಲ್ಲಾ ವಲಯಗಳಲ್ಲೂ ಮಕ್ಕಳು ಮುಂಚೂಣಿಯಲ್ಲಿ ಇರಬೇಕೆಂಬ ಉತ್ಕಟತೆಯಿಂದ ಶಾಲೆ ಮುನ್ನಡೆಯುತ್ತಿದೆ.

## ಗಣ್ಯಾತಿಗಣ್ಯರ ಭೇಟಿ–ಸಂವಾದ

ನಿಸರ್ಗ ವಿದ್ಯಾನಿಕೇತನ ಶಾಲೆಗೆ ಅನೇಕ ಗಣ್ಯಾತಿಗಣ್ಯರು ಭೇಟಿ ನೀಡಿದ್ದಾರೆ. ಮಕ್ಕಳೊಂದಿಗೆ ಸಂವಾದ ನಡೆಸಿದ್ದಾರೆ. ತಮ್ಮ ಅನುಭವವನ್ನು ಹಂಚಿಕೊಂಡಿದ್ದಾರೆ. ಏರ್ ಚೀಫ್ ಮಾರ್ಷಲ್ ಬಿ.ಯು. ಚಂಗಪ್ಪ, ಬೆಂಗಳೂರಿನ ಜಿಕೆವಿಕೆಯ ಡಾ. ವೆಂಕಟೇಶ್, ಅರ್ಜುನ್ ಪ್ರಶಸ್ತಿ ಪುರಸ್ಕೃತ ಪ್ರಕಾಶ್, ರಾಜ್ಯ ಕಬ್ಬಡಿ ಆಟಗಾರ ಮರಿಯಪ್ಪ, ಪುಟ್ಬಾಲ್ ಆಟಗಾರ ರಾಮಕೃಷ್ಣ, ಕನ್ನಡದ ಖ್ಯಾತ ಹಿನ್ನೆಲೆ ಗಾಯಕರಾರ ಬಿ.ಕೆ. ಸುಮಿತ್ರಾ ಹಾಗೂ ಡಾ. ಶಶಿಧರ ಕೋಟೆ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಸಾಹಿತಿ ಡಾ. ಲಕ್ಷ್ಮಣದಾಸ್, ಹಾಸ್ಯ ಕವಿ ಹಾಗೂ ನಬಾರ್ಡ್ ಬ್ಯಾಂಕಿನ ಆರ್ಥಿಕ ಸಲಹೆಗಾರ ವೈ.ಕೆ. ಗುಂಡೂರಾವ್, ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ವಿಜ್ಞಾನಿ ಡಾ. ಆರ್.ಎಲ್. ಕಶ್ಯಪ್, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮೊದಲ ಕುಲಪತಿ ಹಾಗೂ ಸಾಹಿತಿ ಡಾ. ಮಲ್ಲೇಪುರಂ ವೆಂಕಟೇಶ್ ಸೇರಿದಂತೆ ವಿವಿಧ ಕ್ಷೇತ್ರದ ಗಣ್ಯರು ಭೇಟಿ ನೀಡಿದ್ದು, ಶಾಲೆಯ ಹಿರಿಮೆಯನ್ನು ಹೆಚ್ಚಿಸಿದೆ.

